# ‘ಅಧಿನಾಯಕಿ’ ನಾಟಕದಲ್ಲಿ ಸ್ತ್ರೀ ಶೋಷಣೆಯ ವಿಭಿನ್ನ ನೆಲೆಗಳು

**ಸುನಿಲ್ ಎನ್.ಸಿ.* & ಎನ್. ಸುಶೀಲ****

**DOI: https://doi.org/10.5281/zenodo.20614757**

**ABSTRACT**

ಬೇಲೂರು ರಘುನಂದನ್ ರಚಿಸಿರುವ ‘ಅಧಿನಾಯಕಿ’ ನಾಟಕವು ಪಿತೃಪ್ರಧಾನ ವ್ಯವಸ್ಥೆಯಲ್ಲಿ ನಿರಂತರವಾಗಿ ನಡೆಯುತ್ತಿರುವ ಸ್ತ್ರೀ ಶೋಷಣೆಯ ವಿಭಿನ್ನ ನೆಲೆಗಳನ್ನು ಮಾರ್ಮಿಕವಾಗಿ ಅನಾವರಣಗೊಳಿಸುತ್ತದೆ. ಪುರಾಣ, ಇತಿಹಾಸ ಹಾಗೂ ಸಮಕಾಲೀನ ವಿದ್ಯಮಾನಗಳನ್ನು ಅತ್ಯಂತ ಸೃಜನಶೀಲವಾಗಿ ಬೆಸೆಯುವ ಮೂಲಕ, ಮಹಿಳೆಯ ಮೇಲಿನ ದೌರ್ಜನ್ಯ, ಅಸಮಾನತೆ ಮತ್ತು ಅಧಿಕಾರದ ದರ್ಪವನ್ನು ಈ ಬರಹದಲ್ಲಿ ಕಟುವಾಗಿ ಪ್ರಶ್ನಿಸಲಾಗಿದೆ. ಸೀತೆ, ದ್ರೌಪದಿ ಮತ್ತು ಅಕ್ಕಮಹಾದೇವಿಯಂತಹ ಪಾತ್ರಗಳ ಐತಿಹಾಸಿಕ ತುಮುಲಗಳನ್ನು ವರ್ತಮಾನದ ಮಹಿಳೆಯರ ಸಂಕಟಗಳಿಗೆ ಸಮೀಕರಿಸಲಾಗಿದೆ. ಸತಿಪದ್ಧತಿ, ಬಾಲ್ಯವಿವಾಹ, ಹಾಗೂ ಕೇವಲ ಭೋಗದ ವಸ್ತುವಾಗಿ ಹೆಣ್ಣನ್ನು ನೋಡುವ ವಿಕೃತ ಮನಸ್ಥಿತಿಗಳ ವಿರುದ್ಧ ‘ಅಧಿನಾಯಕಿ’ ಸಿಡಿದೇಳುತ್ತಾಳೆ. ಅಸಹಾಯಕತೆಯನ್ನು ಮೆಟ್ಟಿಬೆಳೆದು, ಪುರುಷರ ಸರ್ವಾಧಿಕಾರವನ್ನು ಧಿಕ್ಕರಿಸಿ, ಸಮಾನ ಹಕ್ಕು, ಸ್ವಾಭಿಮಾನ ಹಾಗೂ ನಿರ್ಧಾರ ತೆಗೆದುಕೊಳ್ಳುವ ಅಧಿಕಾರಕ್ಕಾಗಿ ಆಗ್ರಹಿಸುವ ಭರವಸೆಯ ಪ್ರತಿರೂಪವಾಗಿ ಸ್ತ್ರೀ ಸಂವೇದನೆಯನ್ನು ಇಲ್ಲಿ ಅತ್ಯಂತ ಪ್ರಬುದ್ಧವಾಗಿ ವಿಶ್ಲೇಷಿಸಲಾಗಿದೆ.

**KEYWORDS:** ಅಧಿನಾಯಕಿ ನಾಟಕ, ಸ್ತ್ರೀ ಶೋಷಣೆ, ಪಿತೃಪ್ರಧಾನ ವ್ಯವಸ್ಥೆ, ಸ್ತ್ರೀ ಸಂವೇದನೆ, ಸಮಾನತೆ, ಸ್ವಾಭಿಮಾನ.

* **ಸುನಿಲ್ ಎನ್.ಸಿ.,** ಸಂಶೋಧನಾರ್ಥಿ, ತುಲನಾತ್ಮಕ ದ್ರಾವಿಡ ಸಾಹಿತ್ಯ ಮತ್ತು ತತ್ವಶಾಸ್ತ್ರ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ.

** **ಪ್ರೊ. ಎನ್. ಸುಶೀಲ,** ಮುಖ್ಯಸ್ಥರು, ತುಲನಾತ್ಮಕ ದ್ರಾವಿಡ ಸಾಹಿತ್ಯ ಮತ್ತು ತತ್ವಶಾಸ್ತ್ರ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ.

ಅನಾದಿ ಕಾಲದಿಂದಲೂ ಮಹಿಳೆ ವಿಭಿನ್ನ ರೂಪಗಳಲ್ಲಿ ಅಸಮಾನತೆ, ಶೋಷಣೆ, ದಬ್ಬಾಳಿಕೆ, ಅವಮಾನ, ಅನುಮಾನಗಳನ್ನು ಎದುರಿಸುತ್ತಾ ಬರುತ್ತಿರುವುದು ಶೋಚನೀಯ ಸಂಗತಿ. “ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು ಕಣ್ಣು ಕಾಣದ ಗಾವಿಲರು” ಎಂಬ ಸಂಚಿಹೊನ್ನಮ್ಮನ ಈ ಸಾಲುಗಳು ಸರ್ವಕಾಲಿಕವಾದದ್ದು. ಹೆಣ್ಣಿನ ಹಿರಿತನವನ್ನು ಅರಿಯದ ಅವಿವೇಕಿಗಳು, ಸ್ತ್ರೀ ವಿರೋಧಿ ಮನಸ್ಥಿತಿಗಳ ಸಂಖ್ಯೆ ಸಂಪೂರ್ಣ ಅಳಿಯಬೇಕಿದೆ. ಮಹಿಳೆಯರ ಮೇಲಿನ ಶೋಷಣೆ ಕೇವಲ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿಲ್ಲ. ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ಅಷ್ಟೇ ಏಕೆ ಅಡುಗೆ ಮನೆಯಿಂದ ಹಿಡಿದು ಅಧಿಕಾರ ವರ್ಗದ ಎಲ್ಲಾ ಕ್ಷೇತ್ರಗಳಿಗೂ ಇದರ ಛಾಪು ಆವರಿಸಿಕೊಂಡಿದೆ. ಆಡು ಮುಟ್ಟದ ಸೊಪ್ಪಿಲ್ಲ ಮಹಿಳೆ ಶೋಷಣೆಗೊಳಗಾಗದ ಕ್ಷೇತ್ರವಿಲ್ಲ ಎಂದರೆ ತಪ್ಪಾಗಲಾರದು. ಈ ಶೋಷಣೆಯ ಎಲ್ಲಾ ವಿಕೃತಿಗಳ ನಿವಾರಣೆಗೆ ಸಾಕಷ್ಟು ಚರ್ಚೆಗಳಾಗಿದ್ದರೂ ಕೂಡ ಅವುಗಳ ನಿರ್ಮೂಲನಾ ಚಟುವಟಿಕೆಗಳು ಕಾರ್ಯರೂಪಕ್ಕೆ ಬಂದಿರುವುದು ವಿರಳಾತಿವಿರಳ. ಈ ಎಲ್ಲಾ ಅಸಮಾನತೆಗಳ ತಾಯಿ ಬೇರನ್ನು ಹುಡುಕಿ ಮೂಲೋತ್ಪಾಟನೆ ಮಾಡುವುದು ನಮ್ಮೆಲ್ಲರ ಹೊಣೆಗಾರಿಕೆಯಾಗಬೇಕಿದೆ.

ಭಾರತದಲ್ಲಿ ಪ್ರತಿ ಐವತ್ನಾಲ್ಕು ನಿಮಿಷಕ್ಕೆ ಒಬ್ಬ ಮಹಿಳೆ ಅತ್ಯಾಚಾರಕ್ಕೊಳಗಾಗುತ್ತಿದ್ದಾಳೆಂದು ವಿಶ್ವ ಸಂಸ್ಥೆಯ ಸಮೀಕ್ಷೆ ತಿಳಿಸುತ್ತದೆ. ಸುಮಾರು ಹತ್ತು ಸಾವಿರ ಮಹಿಳೆಯರನ್ನು ಸಮೀಕ್ಷಿಸಲಾಗಿ ಪ್ರತಿಶತ ಐವತ್ತರಷ್ಟು ಮಹಿಳೆಯರು ಮದುವೆಯ ಬದುಕಿನಲ್ಲಿ ಒಂದಲ್ಲ ಒಂದು ರೀತಿಯ ಹಿಂಸೆಯನ್ನು ಅನುಭವಿಸುತ್ತಿದ್ದಾರೆ. ಶೇಕಡ ನಲವತ್ತೆರಡರಷ್ಟು ಮಹಿಳೆಯರು ಪ್ರತಿನಿತ್ಯ ಬೈಗುಳಕ್ಕೆ ಒಳಗಾಗುತ್ತಿದ್ದಾರೆ. ಶೇಕಡ ನಲವತ್ತರಷ್ಟು ಮಹಿಳೆಯರು ನಾನಾ ಬಗೆಯ ದೈಹಿಕ ಹೊಡೆತ-ಬಡಿತಗಳಿಗೆ ಒಳಗಾಗುತ್ತಿದ್ದಾರೆ ಎಂಬುದು ತಿಳಿದು ಬರುತ್ತದೆ. “ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ” ಎಲ್ಲಿ ಹೆಣ್ಣಿಗೆ ಗೌರವ,ರಕ್ಷಣೆ ಸಿಗುತ್ತದೆಯೋ ಅಲ್ಲಿ ದೇವಾನುದೇವತೆಗಳು ಪ್ರಸನ್ನರಾಗುತ್ತಾರೆಂಬ ಮಾತಿದೆ. ಆದರೆ ಪರಂಪರೆಯ ಜೊತೆಗೆ ಇತ್ತೀಚಿನ ದಿನಮಾನಗಳಲ್ಲಿ ಹೆಣ್ಣನ್ನು ಸಮಾನವಾಗಿ ಕಾಣುವ ಯಾವ ನೆಲೆಗಳೂ ನಮ್ಮ ಕಣ್ಣಿಗೆ ಕಾಣದಾಗಿವೆ. ದೇವಾನುದೇವತೆಗಳು ನೆಲೆಸುವ ಮಾತಾದರೂ ಇನ್ನೆಲ್ಲಿ?

ಭಾರತೀಯ ಪರಂಪರೆಯಲ್ಲಿ ಹೆಣ್ಣು ಪಾಲನೆ ಮತ್ತು ಪೋಷಣೆಯಲ್ಲಿ ಭೂಮಿಯಷ್ಟೇ ಸಹನಾಮೂರ್ತಿ. ಅವಳ ಸಹನೆಯನ್ನು ಪುರುಷಪ್ರಧಾನ ವ್ಯವಸ್ಥೆ ಪದೇ ಪದೇ ಪರೀಕ್ಷೆಗಳಿಗೆ ಒಳಗುಪಡಿಸಿ ಅವಳ ಆತ್ಮಾಭಿಮಾನಕ್ಕೆ ಧಕ್ಕೆ ಉಂಟುಮಾಡುತ್ತಿದ್ದರೆ ಒಂದಲ್ಲ ಒಂದು ದಿನ ಇಡೀ ಪಿತೃಪ್ರಭುತ್ವ ಹೆಣ್ಣಿನ ಕಣ್ಣೀರೆಂಬ ಲಾವಾರಸದಲ್ಲಿ ದಹಿಸಬೇಕಾಗುತ್ತದೆ. ಅವಳನ್ನು ಜವಾಬ್ದಾರಿಯುತವಾಗಿ, ಗೌರವಯುತವಾಗಿ ಅರ್ಥೈಸಿಕೊಂಡು ಸಮಾನ ಮನಸ್ಥಿತಿಯ ಅವಕಾಶ ನೀಡಿದರೆ ಈ ಪ್ರಪಂಚವೇ ಅವಳ ಪ್ರೀತಿಯ ಮಡಿಲಲ್ಲಿ ಮಗುವಾಗಿ ನಲಿಯಬಹುದು. ಇದಕ್ಕೆಲ್ಲಾ ಬಹುಮುಖ್ಯವಾಗಿ ಪ್ರತಿಯೊಬ್ಬರಲ್ಲೂ ತಾಯ್ಮಮತೆಯ ಗುಣವಿರಬೇಕಷ್ಟೆ.

ಸ್ತ್ರೀ ಸಂವೇದನೆಯ ಬಗ್ಗೆ ಕನ್ನಡ ಸಾಹಿತ್ಯದಲ್ಲಿ ಸಾಕಷ್ಟು ಕೃತಿಗಳು ಮಾತಾಡಿರುವುದನ್ನು ನಾವೆಲ್ಲರೂ ಓದಿದ್ದೇವೆ, ಕೇಳಿದ್ದೇವೆ. ಪ್ರಸ್ತುತ ದಿನಗಳಲ್ಲಿ ಪುರುಷರು ಸ್ತ್ರೀ ಸಂವೇದನೆಯ ಬಗ್ಗೆ ಬರೆಯುತ್ತಿರುವುದು ಬೆರಳೆಣಿಕೆಯಷ್ಟೆ. ಹೆಣ್ಣಿನ ಅಂತರಂಗ ತಳಸ್ಪರ್ಶಿಯಾಗಿ, ಸೃಜನಶೀಲತೆಯಿಂದ ಸೂಕ್ಷ್ಮ ವಿಚಾರಗಳನ್ನು ಸಹಸ್ರಮುಖಿ ದರ್ಶನವಾಗಿಸುವುದು ಸವಾಲಿನ ಕೆಲಸ. ನೋಡಿದ್ದನ್ನು ನೋಡಿದ ಹಾಗೆಯೇ ನಿರೂಪಿಸುವುದು, ಕೇಳಿದ್ದನ್ನು ಕೇಳಿದಂತೆಯೇ ವ್ಯಕ್ತಪಡಿಸುವುದು, ಅನುಭವಿಸಿದ್ದನ್ನು ಕಣ್ಣಿಗೆ ಕಟ್ಟುವ ಹಾಗೆಯೇ ರಸವತ್ತಾಗಿ ವಿವರಿಸುವುದು ಸಾಮಾನ್ಯ ಸಂಗತಿಯಲ್ಲ. ಈ ರಚನಾ ಕೌಶಲ್ಯ ಎಲ್ಲರಿಗೂ ದಕ್ಕುವುದಿಲ್ಲ. ದಕ್ಕಿದರೂ ಅದು ಎಲ್ಲರಿಗೂ ರುಚಿಸುವುದಿಲ್ಲ. ತನ್ನೊಳಗೆ ಸುಪ್ತವಾಗಿ ಅಸ್ತವ್ಯಸ್ತವಾಗಿ ಕುಳಿತ ಲೋಕಾನುಭವಗಳ ಅಮೂರ್ತ ಸಂಗತಿಗಳಿಗೆ ಮೂರ್ತರೂಪ ಕೊಟ್ಟು ಅದಕ್ಕೊಂದು ನವಿರಾದ ಭಾಷೆಯನ್ನಿತ್ತು ಓದುಗರಿಗೆ ಅಥವಾ ನೋಡುಗರಿಗೆ ಹಿತವಾಗಿ ರುಚಿಸುವಂತೆ ಹದಗೊಳಿಸಿ ಅಣಿಗೊಳಿಸುವ ಶಕ್ತಿ ಬೇಲೂರು ರಘುನಂದನ್ ಅವರ ನಾಟಕಗಳಿಗಿವೆ. ಈ ನಿಟ್ಟಿನಲ್ಲಿ ಮಹಿಳೆಯು ಅಂತರಂಗವಾಗಿ ಮತ್ತು ಬಹಿರಂಗವಾಗಿ ಅನುಭವಿಸುತ್ತಿರುವ ವ್ಯಾಕುಲತೆಗಳನ್ನು, ಪುರುಷ ಪ್ರಧಾನ ವ್ಯವಸ್ಥೆಯ ಅಧಿಕಾರಿತನದ ದೌರ್ಜನ್ಯ,ಅಸಮಾನತೆ,ಅಧೀನತೆಗಳ ನಿಗೂಢಗಳನ್ನು ಅನೇಕ ವಿಸ್ತಾರಗಳಲ್ಲಿ ಶೋಧನಾತ್ಮಕ ಬೆರಗಿನಲ್ಲಿ ಬಯಲುಗೊಳಿಸುವ ಬೇಲೂರು ರಘುನಂದನ್ ಅವರ "ಅಧಿನಾಯಕಿ" ನಾಟಕ ಸ್ತ್ರೀ ಸಂವೇದನೆಗೆ ಹೊಸ ಕಾಣ್ಕೆಯನ್ನಿತ್ತಿದೆ ಎನ್ನಬಹುದು.

'ಅಧಿನಾಯಕಿ' ನಾಟಕದಲ್ಲಿ ಪುರಾಣ, ಇತಿಹಾಸ, ಸಮಕಾಲೀನ ವಿದ್ಯಮಾನಗಳೆಂಬ ತ್ರಿಕೋನ ಬಿಂದುಗಳು ಒಟ್ಟಿಗೆ ಸಂಧಿಸುತ್ತವೆ. ಬಿ.ಎಂ.ಶ್ರೀ. ಅವರು ಪಾಶ್ಚಿಮಾತ್ಯ ಕಾವ್ಯ ಸೌಂದರ್ಯವನ್ನು ಕನ್ನಡಕ್ಕೆ ತಂದು ಕನ್ನಡದ ಶೈಲಿಯಲ್ಲಿ ಅದಕ್ಕೆ ಮರುಜೀವ ನೀಡುವ ಸಂದರ್ಭದಲ್ಲಿ

**"ಇವಳ ಸೊಬಗನವಳು ತೊಟ್ಟು ನೋಡಬಯಸಿದೆ**
**ಅವಳ ತೊಡಿಗೆ ಇವಳಿಗಿಟ್ಟು ಹಾಡಬಯಸಿದೆ"**

ಎಂದು ಬರೆಯುತ್ತಾರೆ ಅದೇ ದಾಟಿಯಲ್ಲಿ ಬೇಲೂರು ರಘುನಂದನ್ ಅವರು ಪುರಾಣ, ಇತಿಹಾಸದ ಸ್ತ್ರೀ ಪಾತ್ರಗಳ ನೋವಿನ ಕಥೆಗಳನ್ನು ವರ್ತಮಾನದ ಹೆಣ್ಣಿನ ಶೋಷಣೆಗೆ ಸಮೀಕರಿಸಿ ಭಿನ್ನ ಶೈಲಿಯಲ್ಲಿ ನಾಟಕವನ್ನು ಹೆಣೆದಿದ್ದಾರೆ. ಕಥೆಯೊಳಗೆ ಕಥೆಗಳಾಗಿ ಕಥಾನಾಯಕಿ ಪುರುಷ ಕುಲದ ಮಹಾಪರಾಧಗಳನ್ನು ಲೋಕದರ್ಶನವನ್ನಾಗಿಸುವ ಅಧಿನಾಯಕಿಯಾಗಿ ಪ್ರಕಟಗೊಳ್ಳುವ ಪರಿ ವಿಶಿಷ್ಟವಾಗಿದೆ. ಈ ನಾಟಕದಲ್ಲಿ ಪುರುಷ ಸರ್ವಾಧಿಕಾರದ ಸಾಮ್ರಾಜ್ಯದಲ್ಲಿ ಬಂಧನಕ್ಕೊಳಗಾದ ಹೆಣ್ಣಿನ ದುಃಖ ದುಮ್ಮಾನಗಳನ್ನೊಳಗೊಂಡ ಆರು ಕಥೆಗಳನ್ನು ಗಮನಿಸಬಹುದು. ಅವು ಬಿಡಿ-ಬಿಡಿಯಾದ ಕಥೆಗಳಾಗಿ ಓದುಗರಿಗೆ ಗೋಚರಿಸುವುದರ ಬದಲಿಗೆ ಅವೆಲ್ಲವೂ ಕೂಡ ಒಂದೇ ಕಥೆಯಂತೆ ನಿರೂಪಿತಗೊಳ್ಳುತ್ತವೆ. ಹೆಣ್ಣಿನ ಅಸಹಾಯಕತೆ, ತುಮುಲಗಳ ಆಲಾಪಗಳಾಗಿ ಮತ್ತೊಮ್ಮೆ ಸ್ವಾಭಿಮಾನದ ಆಕ್ರೋಶಭರಿತ

ದೀರ್ಘಕಥೆಯಾಗಿ ಕಾಣಿಸಿಕೊಳ್ಳುತ್ತದೆ. 'ಅಧಿನಾಯಕಿ' ಯನ್ನು ಓದಿದ ಪ್ರತಿಯೊಬ್ಬ ಓದುಗನಲ್ಲೂ ಸ್ತ್ರೀ ಸಂವೇದನೆಯ ಅಂತಃಕರಣ ಬಲಗೊಳ್ಳುವುದರಲ್ಲಿ ಸಂದೇಹವಿಲ್ಲ.

ಪುರುಷ ನಿರ್ಮಿತ ಸ್ತ್ರೀ ಪ್ರತಿಮೆಯಲ್ಲಿ ಹೆಣ್ಣನ್ನು ಕೇವಲ ನೇಪಥ್ಯಕ್ಕಾಗಿ ವೈಭವೀಕರಿಸಿ, ಅವನು ಏನೇ ತಪ್ಪು ಮಾಡಿದರೂ ಅದನ್ನವಳು ಕ್ಷಮಿಸುತ್ತಾಳೆ ನಾರಿ ಕ್ಷಮಯಾಧರಿತ್ರಿ ಎಂದೆಲ್ಲಾ ಗುಣಗಾನ ಮಾಡಿ ಅವಳಿಗರಿವಾಗದಂತೆಯೇ ಅವಳನ್ನು ತುಚ್ಛವಾಗಿ ಕಾಣುವ ಮನಸ್ಥಿತಿ ನಿಜಕ್ಕೂ ಕ್ಷಮಿಸಲನರ್ಹವಾದಂತದ್ದು. "ತಿರಸ್ಕರಿಸಲ್ಪಟ್ಟ ಮಹಿಳೆಯ ಕೋಪದ ಮುಂದೆ ನರಕದ ಜ್ವಾಲೆಯೂ ಏನೂ ಅಲ್ಲ" ಎಂಬ ಶೇಕ್ಸ್‌ಪಿಯರ್‌ನ ಸಾಲುಗಳು ಸ್ತ್ರೀ ಅಸಮಾನತೆಯನ್ನು ಪ್ರಚೋದಿಸುವ ಮನಸ್ಥಿತಿಗಳಿಗೆ ಬಲವಾಗಿ ನಾಟಬೇಕಿದೆ.

ಅಂತಃಪುರದಲ್ಲಿ ರಾಣಿಯೊಬ್ಬಳ ಅಂತರಂಗದ ವಿಲಾಪದೊಂದಿಗೆ ನಾಟಕ ಪ್ರವೇಶಿಕೆ ಪಡೆದುಕೊಳ್ಳುತ್ತದೆ. ಯುದ್ಧಕ್ಕೆ ತೆರಳುವ ಎರಡು ತಿಂಗಳಿಂದ ಮಹಾರಾಜ ಅವಳೊಟ್ಟಿಗೆ ಮಾತು ನಿಲ್ಲಿಸಿದ್ದಾನೆ. ದಿಗ್ವಿಜಯಕ್ಕೆ ಹೊರಡುವ ದಿನ ಆರತಿ ತೆಗೆದು ಅವನ ಹಣೆಗೆ ತಿಲಕವಿಡುವಾಗಲೂ ಮಾತನಾಡಿಸುವುದಿರಲಿ ಕಣ್ಣೆತ್ತಿಯೂ ರಾಣಿಯನ್ನು ನೋಡದೆ ಯುದ್ಧಕ್ಕೆ ಸಿದ್ಧನಾಗಿ ಹೊರಟು ಬಿಡುತ್ತಾನೆ. ಆಗ ರಾಣಿಯ ಕಣ್ಣೀರಿನ ಹನಿಗಳು ಆರತಿಯ ಜ್ವಾಲೆಯ ಮೇಲೆ ಬಿದ್ದಾಗ ಪ್ರಕಾಶವಾಗಿ ಉರಿಯುತ್ತಿದ್ದ ದೀಪ ಚಟ್-ಚಟ್-ಚಟಾ ಅಂತ ತಣ್ಣಗಾಗುವ ಸನ್ನಿವೇಶ ರಾಣಿಯ ಬದುಕಿನಲ್ಲಿ ಬೆಳಕು ಮರೆಮಾಚಿ ಅವಳ ಬದುಕಿಗೆ ಕತ್ತಲಾವರಿಸಿಕೊಳ್ಳುವ ಸಾಂಕೇತಿಕ ಮುನ್ಸೂಚನೆಯೆಂದೇ ತಿಳಿಯಬಹುದಾಗಿದೆ. ದಿಗ್ವಿಜಯ ಮುಗಿಸಿ ಬರುವಾಗ ಮತ್ತೊಂದು ಹೆಣ್ಣನ್ನು ಗೆದ್ದು ಬಂದಿದ್ದಾನೆ. ಅವಳು ಅದನ್ನು ಗೆಲುವೆಂದು ಒಪ್ಪುವುದೇ ಇಲ್ಲ. ಈತನು ತನ್ನನ್ನು ಹಿಂದೆ ಹೀಗೆಯೇ ಹೊತ್ತುಕೊಂಡು ಬಂದವನು ನನ್ನ ಇಷ್ಟ ಕಷ್ಟಗಳನ್ನು ಕೇಳದೆ ಈ ಅರಮನೆಯೆಂಬ ಸೆರೆಮನೆಯಲ್ಲಿ ಬಂಧಿಸಿದವನು. ಈ ಪ್ರಕ್ರಿಯೆ ಮತ್ತೊಂದು ಹೆಣ್ಣಿನ ಮೇಲೆ ಪುನರಾವರ್ತನೆಯಷ್ಟೆ. ರಾಮಾಯಣ, ಮಹಾಭಾರತ ಮುಂತಾದ ಕಥೆಗಳಲ್ಲಿ ರಾಣಿಯರ ಸ್ವಯಂವರದಲ್ಲಿ ಗೆದ್ದು ಬಂದ ಮಹಾರಾಜರನ್ನು ನಾವು ನೋಡಿದ್ದೇವೆ ಆದರೆ ಈ ಮಹಾರಾಜ ಆಕ್ರಮಣಕಾರಿ ಪುರುಷನಾಗಿ ಕಾಣಿಸಿಕೊಳ್ಳುತ್ತಾನೆ. ಸಕಲೈಶ್ವರ್ಯಗಳನ್ನು ಗೆದ್ದಷ್ಟು ಸುಲಭವಾಗಿ ಹೆಣ್ಣಿನ ಮನಸ್ಸನ್ನು ಗೆಲ್ಲಲು ಸಾಧ್ಯವಿಲ್ಲ. ಬಹುಶಃ ಹೆಣ್ಣಿನ ಮನಸ್ಸನ್ನು ಪುರುಷ ಸಮರ್ಥವಾಗಿ ಗೆದ್ದಿದ್ದರೆ ಯಾವ ಯುದ್ಧಗಳು ಜರುಗುತ್ತಿರಲಿಲ್ಲ ಎಂಬುದನ್ನು ಅಧಿನಾಯಕಿ ಇಲ್ಲಿ ಸ್ಪಷ್ಟಪಡಿಸುತ್ತಾಳೆ.

ಪುರುಷ ನಿರ್ಮಿತ ಕಾನೂನಿನ ನಿಯಮಗಳನ್ನು ಧಿಕ್ಕರಿಸುತ್ತಾ ತಾನೀಗ ರಾಜನ ಹೆಂಡತಿ. ಪಟ್ಟದ ರಾಣಿಯಲ್ಲ ಎನ್ನುವ ಸನ್ನಿವೇಶ 'ವೀಣಾ ಶಾಂತೇಶ್ವರ' ಅವರ "ನಿರಾಕರಣೆ" ಕಥೆಯಲ್ಲಿನ ಶಕುಂತಲೆ ನೆನಪಾಗುತ್ತಾಳೆ. ದುಶ್ಯಂತ ಕೇವಲ ಉಂಗುರದ ಕಾರಣಕ್ಕಾಗಿ ಶಕುಂತಲೆಯನ್ನು ನಿರಾಕರಿಸಿ ಮತ್ತೆ ಶಾಪವಿಮೋಚನನಾದಾಗ ಅವಳನ್ನು ಅರಮನೆಗೆ ಬರುವಂತೆ ಆಹ್ವಾನವಿತ್ತಾಗ ಶಕುಂತಲೆ ತನ್ನ ಮಗ ಭರತನ

ಶ್ರೇಯಸ್ಸಿಗಾಗಿ ತಾಯಿಯಾಗಿ ಅರಮನೆಗೆ ಹೆಜ್ಜೆ ಇಟ್ಟಳೇ ವಿನಃ ದುಶ್ಯಂತನ ರಾಣಿಯಾಗಿ ಅಲ್ಲ. ದುಶ್ಯಂತ ದೈಹಿಕ ತೃಷೆಗಾಗಿ ಅವಳ ಅಂತಃಪುರಕ್ಕೆ ಬಂದಾಗ ಅವಳೊಳಗಿನ ತಿರಸ್ಕೃತ ಪ್ರಜ್ಞೆ ಎಚ್ಚರಗೊಂಡು ಜಾಗೃತವಾಗಿ ಅವನನ್ನು ನಿರಾಕರಿಸುತ್ತಾಳೆ. ಇಲ್ಲಿನ ಅಧಿನಾಯಕಿ ರಾಜನ ಮಾತನ್ನು ಮೀರದೆ ತನ್ನೊಳಗೆ ತಾನೇ ನಿಯಂತ್ರಿತ ಅಸಹಾಯಕ ಹೆಣ್ಣಾಗಿ ನಿಲ್ಲುತ್ತಾಳೆ. ಮಹಾರಾಜ ಯುದ್ಧದಿಂದ ಹಿಂದಿರುಗಿ ಬರುವಾಗಲೆಲ್ಲಾ ಒಂದೊಂದು ಹೆಣ್ಣನ್ನು ಹೊತ್ತು ಬರುವುದು ಅಧಿಕಾರ ದರ್ಪದ ಕುರುಹಿಗೆ ಹಿಡಿದ ದರ್ಪಣವಾಗಿದೆ.

ಕವಿ ಜನ್ನನ 'ಒಲವಾದೊಡೆ ರೂಪಿನ ಕೋಟಲೆ ಏವುದು?' ಎಂಬ ಸಾಲಿನಂತೆ ಪ್ರೀತಿಗೆ ರೂಪಗಳ ಅಂತರವಿಲ್ಲ. ಹೌದು ಒಪ್ಪಿಕೊಳ್ಳತಕ್ಕದ್ದು, ಆದರೆ ಅಧಿನಾಯಕಿಯ ರಾಜ ಹೊತ್ತು ತರುವ ಹೆಣ್ಣಿನ ಮೇಲೆ ಪ್ರೀತಿ ಕಾಣುವ ಬದಲಿಗೆ ಅವನ ಕಾಮವ್ಯಾಮೋಹ ಮತ್ತು ಸರ್ವಾಧಿಕಾರವೇ ವಿಜೃಂಭಿಸುವ ರಾಜಪ್ರಭುತ್ವಗಳ ನಿಗೂಢ ಮನೋಗುಣಗಳನ್ನು ನಾಟಕಕಾರ ಇಲ್ಲಿ ಬಹಿರಂಗವಾಗಿ ಪ್ರಕಟಗೊಳಿಸಿದ್ದಾನೆ. ಗಂಡಸಾದವನು ಲೆಕ್ಕವಿಲ್ಲದ್ದಷ್ಟು ಮದುವೆಯಾಗಬಹುದು ಆದರೆ ಹೆಣ್ಣೊಬ್ಬಳು ಎರಡನೇ ಮದುವೆ ಮಾಡಿಕೊಂಡರೆ ಸಾಕು ಇಡೀ ಸಮಾಜ ಅವಳನ್ನು ಬೇರೆಯ ದೃಷ್ಟಿಕೋನದಲ್ಲೇ ನಿಲ್ಲಿಸಿ ಮಾತಾಡಿಸುತ್ತದೆ. ಪುರುಷನಿಗೆ ತಾನು ಮಾಡಿದ ತಪ್ಪಿನಿಂದ ಸುಲಭವಾಗಿ ಪಾರಾಗಲು ಅವನಿಗೆ ನೂರು ದಾರಿಗಳಿವೆ. ತನ್ನ ಅನುಚಿತ ವರ್ತನೆಯಿಂದ ಹೆಣ್ಣಿಗಾಗುವ ನೋವಿನ ಹೊಣೆಯಿಂದ ತಪ್ಪಿಸಿಕೊಳ್ಳಲು ಆತನಿಗೆ ಅನೇಕ ಮಾರ್ಗಗಳಿವೆ. "ಪುರುಷ ತಪ್ಪು ಮಾಡಿದನೆಂದು ನಮ್ಮ ಸಮಾಜ ಗಂಭೀರವಾಗಿ ಪರಿಗಣಿಸುವುದಿಲ್ಲ" ಆದ್ದರಿಂದ ಆತ ಎಂದಿಗೂ ಲಜ್ಜಿತನಾಗುವುದಿಲ್ಲ. ಅವನಿಗೆ ತನ್ನ ತಪ್ಪಿನ ಅರಿವಾಗುವುದಾದರೂ ಯಾವಾಗ ಎಂಬ ಪ್ರಶ್ನೆಯನ್ನು ಅಧಿನಾಯಕಿ ಇಲ್ಲಿ ಪ್ರಬಲವಾಗಿ ಪ್ರಶ್ನಿಸುತ್ತಾಳೆ.

ಹೆಣ್ಣಿನ ಶರೀರ ಮತ್ತು ಮನಸ್ಸಿಗೆ ಒಂದು ರಸಾಯನ ಸಮಷ್ಟಿ ಇರುತ್ತದೆ. ಶರೀರದ ಬಯಕೆಗೆ ಮನಸ್ಸು ನಿರಾಕರಿಸಬಹುದು ಅಥವಾ ಮನಸ್ಸಿನ ಬಯಕೆಗೆ ಶರೀರ ನಿರಾಕರಿಸಬಹುದು. ಮಹಾರಾಜನ ವರ್ತನೆಗೆ ಅಧಿನಾಯಕಿಯ ಮನಸ್ಸು ಎಂದಿಗೂ ಕ್ಷಮಿಸಲು ಸಾಧ್ಯವಿಲ್ಲ. ಮೈ-ಮನಗಳನ್ನು ಒಪ್ಪಿಕೊಳ್ಳುವುದು ಒಬ್ಬರನ್ನೊಬ್ಬರು ಇಷ್ಟಪಟ್ಟಾಗ ಮಾತ್ರ. ತನ್ನ ಆತ್ಮಸಾಕ್ಷಿಯನ್ನು ಕೊಂದು ಈ ರಾತ್ರಿಗೆ ಹೇಗೆ ಸಿದ್ಧಗೊಳ್ಳಲಿ ಎಂಬ ಮಾತುಗಳು ಮನ ಕಲಕುತ್ತವೆ. ಅಧಿನಾಯಕಿಯ ತಾಯಿ ಮೈಮೇಲೆ ಮಣಗಟ್ಟಲೆ ಬಂಗಾರ ಹೇರುತ್ತಿದ್ದ ರಾಣಿ. ಬಂಗಾರವೆಂದರೆ ಯಾರಿಗೆ ತಾನೆ ಇಷ್ಟವಿಲ್ಲ? ಹೊನ್ನು, ಮಣ್ಣು, ಹೆಣ್ಣಿಗಾಗಿ ಘನಘೋರ ಯುದ್ಧಗಳೇ ನಡೆದು ಹೋಗಿವೆ. 'ವೈಡೂರ್ಯ ಎಲ್ಲಾ ಇಲ್ಲದಿದ್ದರೆ ಮೈ ಹಗುರ ಅನಿಸುತ್ತೆ' ಕಾಲಿಗೆ ಬಂಧನ, ಕೈಗೆ ಬಂಧನ, ಕೊರಳಿಗೆ ಬಂಧನ ಎಂಬ ಸಂಭಾಷಣೆ ವಚನಾಗಾರ್ತಿ ಅಕ್ಕಮಹಾದೇವಿಯ

**'ರತ್ನದ ಸಂಕೋಲೆಯಾದಡೆ ತೊಡರಲ್ಲವೇ?**

**ಮುತ್ತಿನ ಬಲೆಯಾದಡೆ ಬಂಧನವಲ್ಲವೇ?**
**ಚಿನ್ನದ ಕತ್ತಿಯಲ್ಲಿ ತಲೆಹೊಯ್ದಡೆ ಸಾಯದಿರ್ಪರೆ?'**

ಎಂಬ ವಚನವನ್ನು ನೆನಪಿಸುವುದರ ಜೊತೆಗೆ ಮುತ್ತು, ರತ್ನ, ಚಿನ್ನಗಳು ನಮ್ಮನ್ನು ಲೌಕಿಕವಾಗಿ ಬಂಧಿಸುವ ಸೂಚಕಗಳಾಗಿ ಕಾಣಿಸುತ್ತವೆ. ಚಿನ್ನದ ಪಂಜರದಲ್ಲೇ ಗಿಳಿಯನ್ನು ಬಂಧಿಸಿಟ್ಟರೂ ಅದು ಸಂತೋಷವಾಗಿರಲು ಸಾಧ್ಯವಿಲ್ಲ ಹಾಗೆಯೇ ಅಧಿನಾಯಕಿ ರಾಜನ ಅರಮನೆಯಲ್ಲಿದ್ದರೂ ಅವಳಿಗೆ ಪ್ರಶ್ನಿಸುವ ಸ್ವಾತಂತ್ರ್ಯವಿರಲಿಲ್ಲ, ಪ್ರತಿಭಟಿಸುವ ಧೈರ್ಯವಿರಲಿಲ್ಲ.

ರಾಜರ ಕಥೆ ಹೇಳುತ್ತಲೇ ರಾಣಿಯರ ಸಂಕಷ್ಟಗಳು ಅನಾವರಣಗೊಳ್ಳುತ್ತವೆ. ಅಂತಃಪುರದ ಒಳಗೆ ಸುಖಕ್ಕಿಂತ ಕಣ್ಣೀರೇ ಹೆಚ್ಚು. ''ಅಂತಃಪುರದ ಕಿಟಕಿ ಬಾಗಿಲುಗಳ ಪರದೆಗಳು ರಾಣಿಯರ ಕಣ್ಣೀರ ಆವಿಯಿಂದ ತೇವಗೊಂಡಷ್ಟು ಮತ್ತ್ಯಾವುದರಿಂದಲೂ ಒದ್ದೆಯಾಗಿರಲಿಕ್ಕಿಲ್ಲ'' ಮತ್ತೆ ಆ ತೇವವನ್ನು ಜಗತ್ತಿನ ಯಾರಿಂದಲೂ ತೊಳೆಯಲಾಗಿಲ್ಲ ಎನ್ನುವ ಮೂಲಕ ಸ್ತ್ರೀ ಶೋಷಣೆ ಎಂಬುದು ಸಾಮಾನ್ಯ ಮಹಿಳೆಯರಿಗಷ್ಟೇ ಸೀಮಿತವಾದುದಲ್ಲ ಮಹಾರಾಣಿಯರಿಗೂ ಬಿಡದೆ ಕಾಡುತ್ತದೆಂಬುದನ್ನು ನಾಟಕ ವಿಭಿನ್ನ ಶೈಲಿಯಲ್ಲಿ ಗಟ್ಟಿಗೊಳಿಸುತ್ತದೆ. ಕಥೆಯೊಳಗೊಂದು ಕಥೆ ಹೆಣೆಯುತ್ತಾ ಅರಮನೆಗಳು ಸೆರೆಮನೆಗಳಾಗುವ ಬಗೆ ಕೌತುಕಮಯವಾಗಿದೆ. ನಾಚಿಕೆ, ಮಾನ-ಮರ್ಯಾದೆ ಎಂಬುದು ಉಡುವ ಸೀರೆಯಲ್ಲಲ್ಲ ನೋಡುವ ಕಣ್ಣಲ್ಲಿರುತ್ತೆ. ಹೆಣ್ಣನ್ನು ಬೆತ್ತಲೆಗೊಳಿಸಿ ಗಂಡಸರೆಲ್ಲಾ ನಮ್ಮ ಸುತ್ತ ಸುತ್ತಿಕೊಂಡು ನಮ್ಮನ್ನು ಮೆರವಣಿಗೆ ಕರ್ಕೊಂಡೋಗ್ತೀರ ಅಲ್ವೇ? ಎಂದು ಅಧಿನಾಯಕಿಯ ಮುಖೇನ ನಾಟಕಕಾರ ಮಣಿಪುರದಲ್ಲಿ ನಡೆದ ಮಹಿಳೆಯರ ಬೆತ್ತಲೆ ಮೆರವಣಿಗೆಯ ಹೀನಾಯ ಕೃತ್ಯವನ್ನು ಖಂಡಿಸುತ್ತಾನೆ.

ಸಂದರ್ಭಕ್ಕನುಗುಣವಾಗಿ ಬರುವ ಸಂಭಾಷಣೆಯಲ್ಲಿ ಕೆಲವರ ಹೆಸರುಗಳನ್ನು ನಾಟಕಕಾರ ಪ್ರಸ್ತಾಪಿಸಿಲ್ಲ. ಸೋಕಿಯೂ ಸೋಕದ ಹಾಗೆ ಅತ್ಯಂತ ಬುದ್ಧಿವಂತಿಕೆಯ ತಂತ್ರಗಾರಿಕೆಯಿಂದ ಕೆಲವೆಡೆ ವಾಸ್ತವಿಕ ದೃಷ್ಟಾಂತಗಳನ್ನು ನಿರೂಪಿಸಿರುವ ಶೈಲಿ ಮೆಚ್ಚುವಂತದ್ದು. ಕವಿ ಅಥವಾ ನಾಟಕಕಾರ ಕೆಲವು ವಿಚಾರಗಳನ್ನು ನೇರವಾಗಿ ಪ್ರಸ್ತಾಪಿಸದೆ ಪತ್ತೇದಾರಿಯ ರೀತಿಯಲ್ಲಿ ನಿರೂಪಿಸುವುದರಿಂದ ಓದುಗ ಇನ್ನಷ್ಟು ಚುರುಕುಗೊಳ್ಳುತ್ತಾನೆ ಮತ್ತು ಆಲೋಚನಾ ಮಗ್ನನಾಗುತ್ತಾನೆ. ನಾಟಕಕಾರ ಇಲ್ಲಿ ಹೆಸರುಗಳನ್ನು ಪ್ರಸ್ತಾಪಿಸದಿದ್ದರೂ ಕೂಡ ಸಾಮಾಜಿಕ ವಿದ್ಯಮಾನಗಳ ಅರಿವುಳ್ಳ ಓದುಗ ಅವುಗಳನ್ನು ಸೂಕ್ಷ್ಮಗ್ರಹಿಕೆಯಿಂದ ಖಚಿತಗೊಳಿಸಿಕೊಳ್ಳುತ್ತಾನೆ. ಮನೆಯ ಸೊಸೆ ಎನ್ನುವುದನ್ನು ನೋಡದೆ ತುಂಬಿದ ಸಭೆಯೊಳಗೆ ಹೆಣ್ಣಿನ ಸೀರೆ ಸೆಳೆದು ಅವಳನ್ನು ಬೆತ್ತಲೆ ಮಾಡಿದ ಕೃತ್ಯ ನಿಮಗೆ ಘನತೆ ತರುವ ಕೃತ್ಯವೇ? ಎಂದು ದುಶ್ಯಾಸನನಿಂದ ಅಪಮಾನಿತಳಾದ ದ್ರೌಪದಿ ದುಃಖ ಇಲ್ಲಿ ಮಡುಗಟ್ಟಿ ನಿಲ್ಲುತ್ತದೆ. ಆಧುನಿಕ ಕಾಲದಲ್ಲಿಯೂ ದುಶ್ಯಾಸನನಂತಹ ವಿಕೃತ ಮನಸ್ಸುಗಳನ್ನೂ ಇಲ್ಲಿ ಕಾಣಬಹುದು. ಹೆಣ್ಣೆಂಬ ಕನಿಕರವೂ ಇಲ್ಲದೆ ಅವಳನ್ನು ಎಲ್ಲರ ಸಮ್ಮುಖದಲ್ಲಿ ಅವಮಾನಿಸುವುದು ಮಹಾಪರಾಧವೇ ಸರಿ. ಮಾರ್ಚ್ 25, 1989 ರಂದು

ತಮಿಳುನಾಡಿನ ವಿರೋಧ ಪಕ್ಷದ ನಾಯಕಿ ಜಯಲಲಿತಾ ಅವರ ಮೇಲೆ ಕರುಣಾನಿಧಿಯವರ ಡಿಎಂಕೆ ಪಕ್ಷದ ಶಾಸಕರು ದೈಹಿಕವಾಗಿ ಹಲ್ಲೆ ನಡೆಸಿ ಸೀರೆಯ ತುದಿಯನ್ನು ಸಡಿಲಗೊಳಿಸಿದ ದುರ್ಘಟನೆ ಇಡೀ ಮನುಕುಲವೇ ತಲೆತಗ್ಗಿಸುವಂತದ್ದು. ತಿರಸ್ಕರಿಸುವವರನ್ನು ಧಿಕ್ಕರಿಸಿ ನಿಲ್ಲುವುದೇ ಹೆಣ್ಣಿನ ಗುಣವೆಂಬಂತೆ ತಾನು ಮುಖ್ಯಮಂತ್ರಿಯಾಗುವವರೆಗೂ ಈ ಸದನಕ್ಕೆ ಕಾಲಿಡುವುದಿಲ್ಲವೆಂದು ಪಣತೊಟ್ಟು ಮರಳಿ ಮುಖ್ಯಸ್ಥಾನದಲ್ಲಿ ನಿಂತ ಮಹಿಳೆಯ ಕಥೆಯನ್ನೂ ಕೂಡ ಇಲ್ಲಿ ಓದುಗ ಗ್ರಹಿಸಬಹುದು.

ಹೆಣ್ಣಿನ ಸಮ್ಮತಿಯಿಲ್ಲದೆ ಅವಳ ಸೀರೆಯ ಸೆರಗಿಗೆ ಕೈ ಹಾಕಿದವರು ಏನಾದರು ಎಂಬುದನ್ನು ಚರಿತ್ರೆಯ ಪುಟಗಳನ್ನೊಮ್ಮೆ ತಿರುವಿ ತಿಳಿಯಬಹುದು. ಕೌಶಿಕ ಮಹಾರಾಜ ಅಕ್ಕಮಹಾದೇವಿಯ ಅನುಮತಿಯಿಲ್ಲದೆ ಅವಳ ಸೆರಗಿಗೆ ಕೈ ಹಾಕಿದಾಗ ಸ್ವತಃ ಗಂಡನಾದರೂ ಕೂಡ ಲೆಕ್ಕಿಸದೆ

**"ಎಮ್ಮೆಗೊಂದು ಚಿಂತೆ! ಸಮ್ಮಾರನಿಗೊಂದು ಚಿಂತೆ!**
**ಎನಗೆ ಎನ್ನ ಚಿಂತೆ! ನಿನಗೆ ಕಾಮದ ಚಿಂತೆ!**
**ಒಲ್ಲೆ ಹೋಗು, ಸೆರಗ ಬಿಡು ಮರುಳೆ"**

ಎಂದು ಚೆನ್ನಮಲ್ಲಿಕಾರ್ಜುನನೇ ಎನ್ನ ಗಂಡ 'ನನಗೆ ನಿನ್ನ ಗಂಡನತನ ಬೇಕಾಗಿಲ್ಲ' ಎಂದು ಪುರುಷಾಹಂಕಾರವನ್ನು ಪ್ರತಿಭಟಿಸಿದ ಅಕ್ಕಮಹಾದೇವಿ ಸ್ತ್ರೀಕುಲದ ಪ್ರತಿನಿಧಿಯಾಗಿ ಮಾತಾಡುತ್ತಾಳೆ. ಬಹುಶಃ ಇದು ಮಹಿಳಾ ಸಂವಿಧಾನ ಚರಿತ್ರೆಯ ಮೊದಲ ಹೆಜ್ಜೆ. ಸ್ವಂತ ಗಂಡನಾದರೂ ಹೆಂಡತಿಯ ಒಪ್ಪಿಗೆಯಿಲ್ಲದೆ ಅವಳನ್ನು ಬಲಾತ್ಕರಿಸಿದರೆ ಅದನ್ನು ಅತ್ಯಾಚಾರವೆಂದೇ ಕರೆಯಬಹುದು. ದಾಂಪತ್ಯವೆಂದರೆ ಬರಿ ದೇಹ ಮಾಂಸದೊಳಗೆ ಮಾಂಸ ಮಾತ್ರವಲ್ಲ , ಆಸೆಯಲ್ಲ. ದಾಂಪತ್ಯವೆಂದರೆ ಒಬ್ಬರಲ್ಲೊಬ್ಬರು ಲೀನವಾಗುವುದು. ಹೆಣ್ಣಲ್ಲಿರುವ ಗಂಡನ್ನು, ಗಂಡಲ್ಲಿರುವ ಹೆಣ್ಣನ್ನು ಗೌರವಿಸುವುದೇ ಆಗಿದೆ. ಮೈ-ಮನಗಳ ಒಪ್ಪಿಗೆಯ ಅನುಸಂಧಾನದ ತತ್ವವನ್ನು ಕಥೆ ಪ್ರತಿಪಾದಿಸುತ್ತದೆ.

ಪುರಾಣದ ಕಥೆಗಳಲ್ಲಿ ಶೋಷಣೆಗೊಳಗಾದ ಸ್ತ್ರೀ ಪಾತ್ರಗಳೆಲ್ಲವೂ ತನ್ನದೇ ಕಥೆಗಳೆಂಬಂತೆ ಅಧಿನಾಯಕಿ ವ್ಯಕ್ತಪಡಿಸುತ್ತಾಳೆ. ಅರಮನೆಯ ಸುಖವನ್ನು ತೊರೆದು ಅರಣ್ಯದ ಕಷ್ಟಗಳನ್ನು ಎದುರಿಸಿದ ಸೀತೆ ಮೊದಲ ಶೋಷಿತ ಹೆಣ್ಣು ಎಂದು ಗುರುತಿಸಬಹುದು. ರಾವಣ ಸೀತೆಯನ್ನು ಅಪಹರಿಸಿ ಲಂಕೆಯಲ್ಲಿ ಬಂಧನಕ್ಕೀಡು ಮಾಡಿದಾಗ ಅವಳ ಪತಿಭಕ್ತಿಯ ಗುಣ ಸ್ತ್ರೀ ಕುಲಕ್ಕೆ ಆದರ್ಶನೀಯವಾದದ್ದು. ರಾವಣ ಬಹುರೂಪಗಳಿಂದ ಸೀತೆಯನ್ನು ಮೋಹಿಸಿದರೂ ಕೂಡ ಅವಳು ಕಣ್ಣೆತ್ತಿಯೂ ನೋಡಲಿಲ್ಲ ಸ್ವತಃ ರಾವಣನೇ ಸೀತೆಯ ಬಗ್ಗೆ ಪಶ್ಚಾತ್ತಾಪಗೊಳ್ಳುತ್ತಾನೆ. ಕವಿ ನಾಗಚಂದ್ರ 'ರಾಮಚಂದ್ರ ಚರಿತ ಪುರಾಣ'ದಲ್ಲಿ ಸೀತೆಯ ಪತಿಭಕ್ತಿಯನ್ನು ಕುರಿತು ಹೀಗೆ ಹೊಗಳಿದ್ದಾನೆ.

**“ರಾವಣನ ರೂಪು ಸೀತಾದೇವಿಗೆ ತೃಣಕಲ್ಪವಾಯ್ತು**
**ಪತಿಭಕ್ತಿಯೊಳಾರೀ ವನಿತೆಯ ತೆರದಿಂ**
**ಸದ್ಭಾವಮನೊಳಕೊಂಡ ಪುಣ್ಯವತಿಯರ್ ಸತಿಯರ್”**

ಎಂದು ರಾವಣನ ಮೂಲಕ ಸೀತೆಯ ಬಗ್ಗೆ ಗುಣಗಾನ ಮಾಡಿಸಿದ್ದಾನೆ. ಇಂತಹ ಪತಿವ್ರತೆಯ ಶೀಲತ್ವದ ಬಗ್ಗೆ ರಾಮನಿಗೆ ಅನುಮಾನ ಮೂಡಿದಾಗ ಅವಳನ್ನು ಅಗ್ನಿಪ್ರವೇಶಕ್ಕೆ ದೂಡುವ ಆದರ್ಶ ಪುರುಷ ನಮಗೆ ಖಳನಾಯಕನಂತೆಯೇ ಕಾಣಿಸುತ್ತಾನೆ. ಸೀತೆಯಿಂದ ರಾಮನು ದೂರವಿದ್ದಾಗ ರಾಮನೂ ಕೂಡ ತನ್ನ ಶೀಲತ್ವವನ್ನು ಕಳೆದುಕೊಂಡಿರಬಹುದು ಅವನೂ ಕೂಡ ಸೀತೆಯೊಂದಿಗೆ ಅಗ್ನಿ ಪ್ರವೇಶ ಮಾಡಲಿ ಎಂದು ನಮ್ಮ ಸಮಾಜ ಏಕೆ ಪ್ರಶ್ನಿಸಲಿಲ್ಲ ಎಂಬ ಪ್ರಶ್ನೆ ಇಂದಿಗೂ ಗಮನಾರ್ಹ. ವಾಲ್ಮೀಕಿಯ ರಾಮಾಯಣದಲ್ಲಿ ಸೀತೆಯಷ್ಟೇ ಅಗ್ನಿ ಪ್ರವೇಶ ಮಾಡಿದರೆ ಕುವೆಂಪು ಅವರ “ರಾಮಾಯಣ ದರ್ಶನಂ” ಕೃತಿಯಲ್ಲಿ ಸೀತೆ ಅಗ್ನಿ ಕುಂಡಕ್ಕೆ ಪ್ರವೇಶಿಸಿದ ತಕ್ಷಣ ರಾಮನೂ ಕೂಡ ಅಗ್ನಿ ಕುಂಡಕ್ಕಿಳಿಯುತ್ತಾನೆ. ಈ ದೃಶ್ಯ ರಾಮ ಮತ್ತು ಸೀತೆಯ ಪರಸ್ಪರ ಪ್ರೀತಿ, ನಿಷ್ಠೆ ಹಾಗೂ ಕಾನೂನು ನ್ಯಾಯದ ಮುಂದೆ ಎಲ್ಲರೂ ಸಮಾನರು ಎಂಬ ತತ್ವ ಎತ್ತಿ ಹಿಡಿದು ಪ್ರೀತಿ ಮತ್ತು ಸಮಾನತೆಯನ್ನು ಸಮಾಜಕ್ಕೆ ಮನದಟ್ಟು ಮಾಡಿಸುತ್ತದೆ. ವಾಲ್ಮೀಕಿ ರಾಮಾಯಣದಲ್ಲಿ ಇಲ್ಲದ ಮಹತ್ವದ ಬದಲಾವಣೆ ಕುವೆಂಪು ಅವರ ಕೃತಿಯಲ್ಲಿ ಕಾಣಬಹುದು ಈ ರೀತಿಯ ಸಮಾನತೆಯ ಅಂಶಗಳು ಪ್ರತಿಯೊಬ್ಬನಲ್ಲೂ ಮಾರ್ದನಿಸಬೇಕಿದೆ. ಅಧಿನಾಯಕಿ ಈ ರೀತಿಯ ಪುರಾಣ ಪಾತ್ರಗಳ ಮುಖೇನ ಸಮಾನತೆಯ ಪ್ರತಿಬಿಂಬವಾಗಿ ರೂಪುಗೊಳ್ಳುತ್ತಾಳೆ.

‘ಗಂಡ ಸತ್ತಾಗ ಅವನ ಚಿತೆಯಲ್ಲಿ ಪತಿವ್ರತೆಯಾದ ಅವನ ಹೆಂಡತಿ ಜೀವಂತ ಸಾಯಬೇಕಿತ್ತು. ಇದಕ್ಕೆ ಆತ್ಮಾಹುತಿ ಅಂತ ಚೆಂದದ ಹೆಸರಿಟ್ಟಿದ್ರಿ ನೀವು’ ಅವಳು ನಿರಾಕರಿಸಿದರೆ ತುಂಡು ತುಂಡಾಗಿ ಕತ್ತರಿಸಿ ಬೆಂಕಿಗೆ ಎಸೆಯುತ್ತೀರಿ. ಅದೇ ಹೆಂಡತಿ ಸತ್ತರೆ ಗಂಡನನ್ನು ಏಕೆ ಹೆಂಡತಿಯ ಚಿತೆಗೆ ತಳ್ಳುವುದಿಲ್ಲವೆಂದು ಸತಿಪದ್ಧತಿಯೊಂದಿಗೆ ಅಸಮಾನತೆಯ ಸತ್ಯತೆಯನ್ನು ಮುಖಾಮುಖಿಯಾಗಿ ಅಧಿನಾಯಕಿ ನ್ಯಾಯಯುತವಾಗಿ ಪ್ರತಿಭಟಿಸುತ್ತಾಳೆ. ಹತ್ತಾರು ಸ್ತರಗಳಲ್ಲಿ ಹೆಣ್ಣು ನೋವಿನಿಂದ ಮರಗುವ ಘಟನೆಗಳ ನೂಲುಗಳನ್ನು ಈ ನಾಟಕ ತನ್ನೊಡಲಿನಲ್ಲಿಟ್ಟುಕೊಂಡು ಸಾಗುತ್ತದೆ. ಅದರಲ್ಲಿ ಬಾಲ್ಯವಿವಾಹವೂ ಸಹ. ತೊಟ್ಟಿಲುಗಳಿಗೆ ಮದುವೆ ಮಾಡುವ ಸಂದರ್ಭಗಳನ್ನೂ ಕೂಡ ಚರಿತ್ರೆ ತನ್ನೊಳಗೆ ಜಾಗ ನೀಡಿದೆ. ಆಡುವ ಮಕ್ಕಳಿಗೆ ಬಾಲ್ಯವಿವಾಹ ಮಾಡುವ ಪದ್ಧತಿ ಅಜ್ಞಾನಿಗಳ ಅವಿವೇಕಿತನವನ್ನೇ ತೋರಿಸುತ್ತದೆ. ಹನ್ನೆರಡು, ಹದಿಮೂರು ವಯಸ್ಸಿಗೆಲ್ಲಾ ಹುಡುಗ ಆಕಸ್ಮಿಕವಾಗಿ ಸತ್ತರೆ ಹುಡುಗಿಯ ಕಥೆ ಅರಳುವ ಮಲ್ಲಿಗೆಯ ಮೇಲೆ ಬಿಸಿನೀರೆರೆದಂತೆ ಬದುಕಿನುದ್ದಕ್ಕೂ ಗೋಳಿನ ವ್ಯಥೆ. ಯಾರದೋ ಒತ್ತಾಸೆಗಳಿಗೆ ಹೆಣ್ಣೊಂದು ಬಲಿಯಾಗುವುದೆಂದರೆ ಯಾತರ ನ್ಯಾಯವದು?

**‘ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು**
**ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೆ’**

ಕುವೆಂಪು ಅವರ ಈ ಸಾಲುಗಳನ್ನು ಮೌಢ್ಯ ಪ್ರಪಂಚ ವೈಜ್ಞಾನಿಕವಾಗಿ ಅರ್ಥೈಸಿಕೊಳ್ಳಬೇಕಿದೆ. ಎಂಟತ್ತು ವಯಸ್ಸಿಗೆ ಗಂಡನನ್ನು ಕಳೆದುಕೊಂಡು ಉಸಿರಾಡುವ ತನಕ ಬಿಳಿ ಸೀರೆ ತೊಟ್ಟು ಮದುವೆ, ನಾಮಕರಣ, ಮುಂತಾದ ಸಂಭ್ರಮಾಚರಣೆಯಲ್ಲಿ ತಿರಸ್ಕೃತಳಾಗಿ ಸಂತೋಷಗಳಿಂದ ವಂಚಿತಳಾಗಿ ತನ್ನದಲ್ಲದ ತಪ್ಪಿಗೆ ತಾನೇಕೆ ಇಂತಹ ನೋವಿನ ಕೂಪದಲ್ಲಿ ಬದುಕು ಸಾಗಿಸಬೇಕೆಂಬ ಆಕ್ರೋಶ ಅನುಕ್ಷಣವೂ ಕುದಿಯುತ್ತಿರುತ್ತದೆ. ಇಂತಹ ಹತಾಶೆ, ನಿರಾಶೆ ವ್ಯವಸ್ಥೆಯ ವಿರುದ್ಧ ನಾಟಕಕಾರ ಅಧಿನಾಯಕಿಯನ್ನು ಸಂಘರ್ಷಕ್ಕಿಳಿಸುತ್ತಾನೆ. ಮೂಢನಂಬಿಕೆಗಳಿಗೆ ಅಮಾಯಕ ಹೆಣ್ಣುಗಳು ಬಲಿಯಾಗುತ್ತಿರುವ ಪರಿಪಾಟಲುಗಳನ್ನು ಅಧಿನಾಯಕಿ ಇಲ್ಲಿ ಬೋಧಿಸಲ್ಪಡುತ್ತಾಳೆ. 'ದ.ರಾ. ಬೇಂದ್ರೆ' ಅವರ

**'ಶಾಸ್ತ್ರದಲ್ಲಿ ದೋಷವಿದ್ದರೆ ಹೃದಯದಲ್ಲಿ ತಿದ್ದಬಹುದು**
**ಹೃದಯದಲ್ಲಿ ದೋಷವಿದ್ದರೆ ಶಾಸ್ತ್ರ ಏನು ಮಾಡುವುದು?'**

ಎಂಬ ಸಾಲುಗಳು ಸಹ ಮೂಢನಂಬಿಕೆಗಳ ವಿರುದ್ಧವಾಗಿ ಇದಕ್ಕೆ ಪೂರಕವಾಗಿ ಓದುಗನೊಂದಿಗೆ ಮಾತಾಡುತ್ತವೆ. ಇಲ್ಲಿನ ಅಧಿನಾಯಕಿ ಕೇಳುತ್ತಿರುವುದು ಪುರುಷನ ಅನುಕಂಪವಲ್ಲ ಬದಲಿಗೆ ಬದುಕುವ, ಪ್ರಶ್ನಿಸುವ ಸಮಾನ ಅವಕಾಶವಷ್ಟೆ. ತೊಟ್ಟಿಲು ತೂಗುವ ಕೈ, ಅಡುಗೆ ಮಾಡುವ ಕೈ, ನೀವು ಹೇಳಿದ್ದನ್ನು ತೊಳೆಯುವ ಕೈ, ಮುಸುರೆ ಬೆಳಗುವ–ತಿಕ್ಕುವ ಕೈ, ಹಡೆಯೋ–ಹಾಲುಣಿಸುವ ಕೈಗಳಿಗೆ ಅಧಿಕಾರ ಕೊಟ್ಟು ನೋಡಿ ಅದು ಆದೇಶ ನೀಡಬಲ್ಲದು; ಕಾನೂನು ಕಟ್ಟಳೆಗಳನ್ನು ರೂಪಿಸಬಲ್ಲದು; ಸಹಿ ಹಾಕಬಲ್ಲದೆಂಬ ಸಮಾನತೆಯ ಇಂಗಿತವನ್ನು ಅಧಿನಾಯಕಿಯ ಮೂಲಕ ನಾಟಕಕಾರ ಈ ಸಮಾಜಕ್ಕೆ ಬೇಡಿಕೆಯಿಟ್ಟಿದ್ದಾನೆ. ಹೆಣ್ಣನ್ನು ಸುಲಭವಾಗಿ ಯಾವುದ್ಯಾವುದೋ ಬಂಧನಗಳ ಸೋಗಿನಲ್ಲಿ ಪುರುಷ ಕಟ್ಟಿಹಾಕಬಹುದೆಂಬ ಭ್ರಮೆಯಲ್ಲಿದ್ದಾನೆ. "ಭೂಮಿಯೊಳಗೆ ಹರಡಿರುವ ಬೇರುಗಳನ್ನೆಲ್ಲಾ ಹುಡುಕಿ ಕಿತ್ತು ಹಾಕಲು ನಿಮ್ಮಿಂದ ಸಾಧ್ಯವೇ?" ಎಂಬ ಆಕ್ರೋಶಭರಿತ ಬಾಣಗಳು ಗಂಡಾಳ್ವಿಕೆಯನ್ನು ನೇರವಾಗಿ ಚುಚ್ಚುತ್ತವೆ.

ಕುವೆಂಪು ಅವರ "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ಎಂಬ ಮಾತಿನಂತೆ ಸಕಲರೂ ಸಮಾನರೆನಿಸುವ ಕಾಲವಿದು. ನಿಮ್ಮ ಮಿತಿಗಳಲ್ಲಿ ನಾವು ಅಡಗಿ ಕೂರಬೇಕಿಲ್ಲ. ಇಷ್ಟು ದಿನ ನೀವೇಳಿದಂತೆ ನಾವು ಕೇಳಿದ್ದೇವೆ. ಇನ್ನು ಮುಂದೆ ನಾವು ಹೇಳಿದಂತೆ ನೀವು ಕೇಳಬೇಕಿದೆ. ಇದು ಸರ್ವ ಸ್ವಾತಂತ್ರ್ಯ ಸಮಾನತೆಯ ಕಾಲವೆಂದು ಪುರುಷ ಪ್ರಧಾನ ವ್ಯವಸ್ಥೆ ಅವಸಾನಗೊಳ್ಳುವ ಎಚ್ಚರಿಕೆಯನ್ನು ನಾಟಕ ಸಶಕ್ತವಾಗಿ ಕಟ್ಟಿಕೊಟ್ಟಿದೆ. ಭೂತಕಾಲದ ಪುರಾಣ, ಚರಿತ್ರೆಗಳನ್ನು ಮುರಿದು ವರ್ತಮಾನದಲ್ಲಿ ಹೊಸದಾಗಿ ಕಟ್ಟುವ ಬೇಲೂರು ರಘುನಂದನ್ ಅವರ ಸೃಜನಶೀಲತೆಯ ಪ್ರಬುದ್ಧ ಕೌಶಲ್ಯ ನಮ್ಮನ್ನು ಆಕರ್ಷಿಸುತ್ತದೆ. ಗೋಳುಗಳನ್ನೇ ತುಂಬಿಕೊಂಡ ಹೆಣ್ಣು ಅಭದ್ರತೆಗಳ ನಡುವೆ ಗೆದ್ದು ಬರುವ ಭರವಸೆಯ ರೂಪಕವಾಗಿ 'ಅಧಿನಾಯಕಿ'ಯನ್ನು ನಾಟಕಕಾರ ಇಲ್ಲಿ ಅನ್ವೇಷಣಾತ್ಮಕವಾಗಿ ಚಿತ್ರಿಸಿದ್ದಾನೆ.

### ಆಕರ ಗ್ರಂಥ:

1. ಅಧಿನಾಯಕಿ (ನಾಟಕ) – ಬೇಲೂರು ರಘುನಂದನ್

### ಪರಾಮರ್ಶನ ಗ್ರಂಥಗಳು:

1. ದಿಕ್ಸೂಚಿ (ಮಾಸಪತ್ರಿಕೆ), ಜುಲೈ 2003
2. ನಾಗಚಂದ್ರ, ಪಂಪರಾಮಾಯಣ.
3. ಕುವೆಂಪು, (2011), ರಾಮಾಯಣ ದರ್ಶನಂ, ಮೈಸೂರು: ಪ್ರಸಾರಾಂಗ, ಮೈಸೂರು ವಿ.ವಿ.